**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 246 /2025**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಶ್ರೀಮತಿ ಸುನೀತಾ
ಗಂಡನ ಹೆಸರು : ಉಸ್ಮಾನ ಎ
ವಯಸ್ಸು : 48 ವರ್ಷ
ಉದ್ಯೋಗ : ಅಬಕಾರಿ ನಿರೀಕ್ಷಕರು, ಮಂಗಳೂರು
ವಾಸ್ತವ್ಯ : ಮಂಗಳೂರು

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 09/05/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿನಾಂಕಃ 09.02.2024 ರಿಂದ ಜೂನ್ 12, 2024 ರವರೆಗೆ ಭಟ್ಕಳದಲ್ಲಿ ಉಪ ನೀರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. 2024 ರ ಲೋಕ ಸಭೆಯ ಚುನಾವಣೆಯ ನಿಮಿತ್ತ ಇಲಾಖೆಯ ವಾಹನದಲ್ಲಿ ಚಾಸಾ 2 ಮತ್ತು 3 ರವರ ಜೊತೆಯಲ್ಲಿ ರಾತ್ರಿ ಗಸ್ತು ಕರ್ತವ್ಯದಲ್ಲಿದ್ದಾಗ ದಿಃ 24.04.2024 ರಂದು ರಾತ್ರಿ ಸಮಯದಲ್ಲಿ ಸಾಗರ ರಸ್ತೆಯ ಗುಳ್ಮಿ ಕ್ರಾಸ್ ನಲ್ಲಿ ಗುಳ್ಮಿ ಕಡೆಯಿಂದ ದ್ವಿಚಕ್ರ ವಾಹನದಲ್ಲಿ ಒಬ್ಬ ಸವಾರನು ತನ್ನ ಕಾಲು ಇಡುವ ಜಾಗದಲ್ಲಿ ಒಂದು ವಿಮಲ್ ಪರಾಗ್ ಚೀಲ ಇಟ್ಟುಕೊಂಡಿದ್ದು ನಾವು ಸಂಶಯದಿಂದ ದ್ವಿಚಕ್ರ ವಾಹನವನ್ನು ನಿಲ್ಲಿಸಿದಾಗ ಆತನು ಗಡಿಬಿಡಿಯಿಂದ ವಾಹನ ನಿಲ್ಲಿಸಿದ್ದು ನಾವು ಆತನನ್ನು ಸುತ್ತುವರೆದು ಆತನ ಹೆಸರು ಕೇಳಿದಾಗ ಆತನು ತನ್ನ ಹೆಸರು ರಾಮಕೃಷ್ಣ ನಾಗಪ್ಪ ನಾಯ್ಕ ಎಂದು ತಿಳಿಸಿರುತ್ತಾರೆ. ಸದರಿ ಚೀಲದಲ್ಲಿ ಏನು ಇದೆ ಎಂದು ಕೇಳಿದಾಗ ಅದರಲ್ಲಿ ಮದ್ಯ ಇದೆ ಎಂದು ತಿಳಿಸಿರುತ್ತಾರೆ. ಸದರಿ ಮದ್ಯ ತೆಗೆದುಕೊಳ್ಳಲು ಪಾಸ್ ಯಾ ಪರಮೀಟು ಕೇಳಿದಾಗ ಆತ ಇಲ್ಲವೆಂದು ಹೇಳಿದ್ದು ಇರುತ್ತದೆ. ನಮಗೆ ನ್ಯಾಯಾಲಯದಿಂದ ಕಾಲಾವಕಾಶ ಇಲ್ಲದ ಕಾರಣ ಸ್ಥಳದಲ್ಲಿ ಸರ್ಚ ವಾರಂಟ ತಯಾರಿಸಿದ್ದು ಇರುತ್ತದೆ. ಪಂಚರನ್ನು ಹುಡುಕಿದಾಗ ಯಾರು ಸಿಗದೇ ಇದ್ದು ಇಲಾಖೆಯ ಸಿಬ್ಬಂದಿಯನ್ನೇ ಪಂಚರಾಗಿ ಮಾಡಿ ಚೀಲವನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ 90 ಎಮ್ ಎಲ್ ನ ಮದ್ಯದ ಟೆಟ್ರಾ ಪ್ಯಾಕೇಟುಗಳು ಇದ್ದುದು ಕಂಡುಬಂದಿದ್ದು, ಅದರಲ್ಲಿ ಒಲ್ಡ ಟ್ರಾವೇರ್ ವಿಸ್ಕಿಯ 90 ಎಮ್ ಎಲ್ ನ 20 ಪ್ಯಾಕೇಟ್, 90 ಎಮ್ ಎಲ್ ನ ಹೈವರ್ಡನ 48 ಟೆಟ್ರಾ ಪ್ಯಾಕೇಟ್ ಹಾಗೂ 90 ಎಮ್ ಎಲ್ ನ ಒರಿಜಿನಲ್ ವಿಸ್ಕಿಯ 48 ಟೆಟ್ರಾ ಪ್ಯಾಕೇಟುಗಳು ಒಟ್ಟು 116 ಟೆಟ್ರಾ ಪ್ಯಾಕೇಟು ಕಂಡುಬಂದಿರುತ್ತದೆ.

ದೊರೆತ ಸ್ವತ್ತಿನಲ್ಲಿ ತಲಾ 10 ಎಮ್ ಎಲ್ ನ ಸರಾಯಿಯಯನ್ನು ಟೆಟ್ರಾ ಪ್ಯಾಕೇಟಿನಿಂದ ಬೇರ್ಪಡಿಸಿ ಬಿಳಿ ಬಟ್ಟೆಯಿಂದ ಕಟ್ಟಿ ದಾರದಿಂದ ಕಟ್ಟಿ ಇಲಾಖಾ ಮುದ್ರೆ ಒತ್ತಿ ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದು ಇರುತ್ತದೆ. ಪಂಚನಾೆಮಯನ್ನು ರಾತ್ರಿ 11.15 ರಿಂದ 12.00 ಗಂಟೆಯವರೆಗೆ ತಯಾರಿಸಲಾಯಿತು. ಆರೋಪಿತನಿಗೆ ಕಚೇರಿಗೆ ಕರೆದುಕೊಂಡು ಹೋಗಿ ಅವರಿಗೆ 41 ಎ ಪ್ರಕಾರ ನೊಟೀಸು ನೀಡಲಾಗಿತ್ತು. ನಂತರ ಪ್ರ ವ ವರದಿ ಹಾಗೂ ಪಿರ್ಯಾದನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿದ್ದು ಇರುತ್ತದೆ. ದಿಃ 08.05.2024 ರಂದು ಚಾಸಾ 2 ರವರ ಮೂಲಕ ರಾಸಾಯನಿಕ ಪರೀಕ್ಷೆಗೆ ದಾರವಾಡಕ್ಕೆ ಕಳುಹಿಸಿದ್ದು ಅದರ ವರದಿಯನ್ನು ದಿಃ 15.05.2024 ರಂದು ಪಡೆಯಲಾಗಿತ್ತು. ದ್ವಿಚಕ್ರವಾಹನದ ಬಿ ಎಕ್ಷೆಕ್ಷ ವರದಿ ಪಡೆಯಲು ಸಾರಿಗೆ ಅಧಿಕಾರಿಗಳಿಗೆ ದಿಃ 13.05.2024 ರಂದು ನೀಡಲು ಕೇಳಿಕೊಂಡಿದ್ದು ವರದಿಯನ್ನು ದಿಃ 20.05.2024 ರಂದು ಪಡೆದಿದ್ದು ಇರುತ್ತದೆ. ಅದು ಕೆಎ 47 ಯು 2018 ನಂಬರಿನ ಟಿ ವಿ ಎಸ್ ಜೂಪಿಟರ್ ಕಂಪನಿಯ ದ್ವಿಚಕ್ರ ವಾಹನ ಆಗಿತ್ತು. ಅದು ಗೋಲ್ಡನ್ ಬಣ್ಣದಾಗಿತ್ತು. ವರ್ಗಾವಣೆಯಾದ ಕಾರಣ ಪ್ರಕರಣವನ್ನು ದಿಃ 12.06.2024 ರಂದು ಮುಂದಿನ ತನಿಖೆಗೆ ಭಟ್ಕಳ ಅಬಕಾರಿ ನಿರೀಕ್ಷಕರಿಗೆ ವಹಿಸಲಾಗಿತ್ತು.

3. ಸಾಕ್ಷಿಯು ಶೋಧನಾ ಸಮುಚ್ಚಿತ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ– 1 ಎಂದು , ಸಾಕ್ಷಿಯು 2 ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–2 ಮತ್ತು 3 ಎಂದು , ಸಾಕ್ಷಿಯ ಸಹಿಗಳನ್ನು ನಿಪಿ–2 ಎ ಮತ್ತು 3 ಎ ಎಂದು ಗುರುತಿಸಲಾಯಿತು.ಸಾಕ್ಷಿಯು ಪಿರ್ಯಾದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ– 4 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ರಾಸಾಯಿನಿಕ ಪರೀಕ್ಷಾ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ– 5 ಎಂದು , ಸಾಕ್ಷಿಯ ಸಹಿಯನ್ನು ನಿಪಿ–5 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮಾಧರಿ ಮೊಹರು ನೋಡಿ ಗುರುತಿಸಿದ್ದು ಅದನ್ನು ನಿಪಿ– 6 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಬಿ ಎಕ್ಷೇಕ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ– 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ–7 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು –1 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್ ಐ ಎನ್ ವಕೀಲರಿಂದ,**

ದಾಳಿ ಕಾಲಕ್ಕೆ ನಾನು ಸರಕಾರಿ ಕರ್ತವ್ಯದಲ್ಲಿದ್ದೇನು. ಸದರಿ ದಿನ ನಾನು ಸಮವಸ್ತ್ರದಲ್ಲಿ ಇರಲಿಲ್ಲ. ಅದಕ್ಕೆ ಯಾವುದೇ ವಿಶೇಷ ಕಾರಣ ಇರಲಿಲ್ಲ . ದಾಳಿಗೆ ನಾವು 4 ಜನ ಹೋಗಿದ್ದು ಇರುತ್ತದೆ. ಪಂಚನಾಮೆಯನ್ನು ಚಾಸಾ –2 ರವರು ಅವರೇ ಪಂಚರಾಗಿ ಬರೆದಿರುತ್ತಾರೆ. ದಾಳಿ ಕಾಲಕ್ಕೆ ಗುನ್ಹಾ ಸ್ಥಳದ ಮೇಲೆ ಯಾವುದೇ ಜನಸಂಚಾರ ಇರಲಿಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ನಮ್ಮ ಠಾಣೆಗೆ

ಇಬ್ಬರು ಪೊಲೀಸ್  ಸಿಬ್ಬಂದಿಗಳು ಬರಲು ಮಾಹಿತಿ ನೀಡಿದ್ದೇವು. ಗುನ್ನಾ ಸ್ಥಳದಲ್ಲಿ ಮೈಲು ಕಲ್ಲು ಇತ್ತು. ಮೈಲು ಕಲ್ಲು ಇದ್ದ ಬಗ್ಗೆ ಪಂಚನಾಮೆಯಲ್ಲಿ ಬರೆದಿಲ್ಲ. ಮುದ್ದೆಮಾಲುಗಳಲ್ಲಿ 20 ಪ್ಯಾಕೇಟುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ್ದು 20 ಪ್ಯಾಕೇಟುಗಳ ಸಿರಿಯಲ್ ನಂಬರುಗಳನ್ನು ನಮೂದು ಮಾಡಿಲ್ಲ. ಮುದ್ದೆಮಾಲುಗಳನ್ನು ಯಾವ ಅಂಗಡಿಯಿಂದ ಖರೀದಿ ಮಾಡಲಾಗಿದೆ ಎಂದು ನನ್ನ ತನಿಖೆಯ ಕಾಲದಲ್ಲಿ ತಿಳಿದುಕೊಂಡಿಲ್ಲ. ಸದರಿ ಪ್ರಕರಣದಲ್ಲಿ ನಾನು ರಾಸಾಯನಿಕ ಪರೀಕ್ಷೆಗೆ ಮುದ್ದೆ ಮಾಲುಗಳನ್ನು ಕಳುಹಿಸಿರುತ್ತೇನೆ ಮತ್ತು ಬಿ ಎಕ್ಸ್ಟ್ರಾಕ್ಟ ಅನ್ನು ಪಡೆದಿರುತ್ತೇನೆ. ದಾಳಿ ಆದ 15 ದಿವಸಗಳ ನಂತರ   ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇನೆ. 15 ದಿನಗಳವರೆಗೆ ಮುದ್ದೆ ಮಾಲು ನಮ್ಮ ಕಚೇರಿಯಲ್ಲಿ ಇದ್ದವು. ವಾಹನದ ಮಾಲೀಕರು ಯಾರೆಂದು ಆರ್ ಟಿ ಒ ಕಚೇರಿಯವರಿಗೆ ಕೇಳಿರುತ್ತೇವೆ. ನನ್ನ  ತನಿಖೆಯ ಅವಧಿಯಲ್ಲಿ ಮುದ್ದೆ ಮಾಲುಗಳ ಮೇಲೆ ಇರುವ ಸಿರಿಯಲ್ ನಂಬರ್ ಸರಿಯಾಗಿ ಕಾಣದೇ ಇದ್ದ ಕಾರಣ ನಾವು ನಮೂದು ಮಾಡಿದ್ದು ಇರುವುದಿಲ್ಲ.  ಮುದ್ದೆಮಾಲುಗಳ ಮೇಲೆ ಲೇಬಲ್ ಇರಲಿಲ್ಲ. ಮುದ್ದೆ ಮಾಲುಗಳ ಮೇಲೆ ಇರುವ ಕ್ಯೂ ಅರ್ ಕೋಡ್ ಅನ್ನು ಪರಿಶೀಲನೆ ಮಾಡಿದರೆ ಅವುಗಳನ್ನು ಯಾವ ಅಂಗಡಿಯಿಂದ ಖರೀದಿ ಮಾಡಿದ್ದಾರೆಂದು ಕಂಡುಬರುತ್ತದೆ ಎಂದರೆ ನಾನು ಪರಿಶೀಲನೆ ಮಾಡಿಲ್ಲ ಎಂದು ಉತ್ತರಿಸಿರುತ್ತಾರೆ. ಮುದ್ದೆಮಾಲುಗಳು ಅಧೀಕೃತ ಸರಾಯಿ ಆಗಿವೆ. ಮುದ್ದೆಮಾಲುಗಳ ಮೇಲೆ ಇರುವ ಸಿರಿಯಲ್ ನಂಬರ್ ಮತ್ತು   ಕ್ಯೂ ಆರ್ ಕೋಡ್ ಇರುವುದರಿಂದ ಅವು ಅಧೀಕೃತ ಸರಾಯಿ ಪ್ಯಾಕೇಟು ಆಗಿವೆ ಎಂದು ಗೊತ್ತಾಗುತ್ತದೆ. ಎಲ್ಲಾ ಮುದ್ದೆಮಾಲುಗಳ ಮೇಲೆ ಇರುವ ಸಿರಿಯಲ್ ನಂಬರುಗಳ ಲೇಬಲ್ಲುಗಳನ್ನು ಯಾರು ತೆಗೆದರು ಎಂದು ನನಗೆ ಗೊತ್ತಿಲ್ಲ. ಲೇಬಲ್ಲುಗಳನ್ನು ಯಾರು ಕಿತ್ತಿರುತ್ತಾರೆಂದು ನಾನು ಆರೋಪಿಗೆ ವಿಚಾರಣೆ ಮಾಡಿಲ್ಲ. ಜಪ್ತು ಮಾಡಿದ ವಾಹನಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ವಾಹನದ ಮಾಲೀಕ ಆರೋಪಿ ಅಲ್ಲ ಎಂದರೆ ಸರಿ. ನಾವು ಯಾವುದೇ ದಾಳಿ ಮಾಡಿಲ್ಲ ಹಾಗೂ ಮುದ್ದೆಮಾಲುಗಳನ್ನು ಆರೋಪಿಯಿಂದ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ.  ಲೋಕಸಭೆ ಚುನಾವಣೆ ನಿಮಿತ್ತ ನಾವು ಕರ್ತವ್ಯ ಮಾಡುತ್ತಿದ್ದೇವೆ ಎಂದು ತೋರಿಸಲು ಸುಳ್ಳು ಪ್ರಕರಣ ದಾಖಲಿಸಿದ್ದೇವೆ  ಎಂದರೆ ಸರಿಯಲ್ಲ.  ಆರೋಪಿಯೂ ನಮಗೆ ಯಾವುದೇ ಸ್ವಖುಷಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.  ಪ್ರ ವ ವರದಿ ದಾಖಲಿಸುವ ಕಾಲಕ್ಕೆ ನಾನು  ಪಿರ್ಯಾದನ್ನು ನೀಡಿರುತ್ತೇನೆ. ಸದರಿ ಪ್ರಕರಣದಲ್ಲಿ ಪ್ರ ವ ವರದಿ ಹಾಗೂ ಪಿರ್ಯಾದನ್ನು ಜೊತೆಯಾಗಿ ಮಾಡಿರುತ್ತೇವೆ. ಪಂಚನಾಮೆ ಮಾಡುವ ಮೊದಲು ಪ್ರ ವ ವರದಿ ದಾಖಲಿಸಿಲ್ಲ. ಗಸ್ತು ತಿರುಗುವಾಗ ದಾಳಿ ಮಾಡಿರುತ್ತೇವೆ. ರಾಸಾಯನಿಕ ಪರಿಕ್ಷೆಗೆ ಕಳುಹಿಸಿದ ಮುದ್ದೆಮಾಲುಗಳನ್ನು ಹೊರತುಪಡಿಸಿ ಉಳಿದ ಮುದ್ದೆಮಾಲುಗಳನ್ನು ಏನು ಮಾಡಿರುತ್ತೇವೆ  ಎಂದು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ. ಉಳಿದ ಮುದ್ದೆಮಾಲುಗಳಿಗೆ ಬ್ರಾಂಡ ಹೆಸರನ್ನು ಬರೆದಿರುತ್ತೇವೆ. ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ

ಮುದ್ದೆಮಾಲು ಹಾಗೂ ನಮ್ಮ ಬಳಿ ಇರುವ ಮುದ್ದೆಮಾಲುಗಳಿಗೂ ಯಾವುದೇ ವ್ಯತ್ಯಾಸ ಇರಲಿಲ್ಲ. ನಾವು ಯಾವುದೇ ದಾಳಿ ಮಾಡದೇ ಇದ್ದ ಕಾರಣ ಮುದ್ದೆಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಅಂತಹ ಯಾವುದೇ ರಾಸಾಯನಿಕ ಪರೀಕ್ಷೆ ಮಾಡುವ ಸಂಸ್ಥೆ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಸಿಬ್ಬಂದಿಗಳ ಸಹಾಯದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**